ಹಾಡು: ಏಕೆಂದು ಕೇಳಿ!!

(ಕೆಲವು ತಿದ್ದುಪಡಿಗಳೊಂದಿಗೆ)

ಏಕೆಂದು, ಏಕೆಂದು,
ಏಕೆಂದು, ಏಕೆಂದು ಏಕೆ ಎಂದು (೨)
ಕಾಮನಬಿಲ್ಲು ಏಕೆಂದು, ನಕ್ಷತ್ರ ಮಿನುಗೋದು ಏಕೆಂದು (೨)
ಮಿಣಕುಹುಳುವೇ ಹಿಂದೆ ಮಿಣಮಿಣನೆ ಮಿನುಗೋದು ಏಕೆಂದು
ಏಕೆಂದು, ಏಕೆಂದು,
ಏಕೆಂದು, ಏಕೆಂದು ಏಕೆ ಎಂದು

ಕಾಗೆಯು ಗೂಬೆಯು ಬಾನಲ್ಲಿ ಹಾರಿದ್ಹಂಗೆ ಬೆಕ್ಕದು ಹಾರೊಲ್ಲ ಏಕೆಂದು (೨)
ಪಾರಿವಾಳ ಇಣಚಿ ಒಂದಾಗಿ ನಕ್ಕಂಗೆ ಕೆಂಪಾದ ದಾಳಿಂಬೆ ನಗಲ್ಲ
ಏಕೆಂದು, ಏಕೆಂದು, ಏಕೆಂದು, ಏಕೆಂದು, ಏಕೆ ಎಂದು

ತುಂಬೆ ಹೂ ಬಿಳುಪು ಏಕೆಂದು, ಗುಲಾಬಿ ಹೂ ಕೆಂಪು ಏಕೆಂದು
ಮಿಣಕು ಹುಳವಿನ ಹಿಂದೆ ಮಿಣಮಿಣನೆ ಮಿನುಗೋದು
ಏಕೆಂದು, ಏಕೆಂದು, ಏಕೆಂದು, ಏಕೆಂದು, ಏಕೆ ಎಂದು

ಮಾರಣ್ಣ ಬೋರಣ್ಣ ಅವನ ತಮ್ಮ ಇವನ ತಂಗಿ ಭಿಕ್ಷೆ ಬೇಡ್ತಿದ್ದಾರೆ ಏಕೆಂದು (೨)
ಅನ್ನ ಔಷಧಿ ಪಡೆಯುವ ದುಡ್ನಲ್ಲಿ ಬಾಂಬನ್ನು ಮಾಡ್ತಿದ್ದಾರೇಕೆಂದು
ಏಕೆಂದು, ಏಕೆಂದು, ಏಕೆಂದು, ಏಕೆಂದು, ಏಕೆ ಎಂದು

ಕೇಳುವ ಕಾಲ ಬಂದಿದೆ ಈಗ
ಎಲ್ಲೆಲ್ಲಿ ಅನ್ಯಾಯ ಹೆಚ್ಚಾಗಿ ನಡೆದಿದೆ
ಅಲ್ಲಲ್ಲಿ ಭಯಪಡದೆ ಎದೆತಟ್ಟಿ ಕೇಳುವ
ಕಾಲ ಬಂದಿದೆ ಈಗ
ಏಕೆಂದು, ಏಕೆಂದು, ಏಕೆಂದು, ಏಕೆಂದು, ಏಕೆ ಎಂದು